ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಿಗಾಗಿ
ಯೋಗ ಶಿಕ್ಷಣ & ದೈಹಿಕ ಶಿಕ್ಷಣ

# ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ದೈಹಿಕ ಚಟುವಟಿಕೆಗಳು ಮತ್ತು ಸ್ಪರ್ಧೆಗಳು

# ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ದೈಹಿಕ ಚಟುವಟಿಕೆಗಳು ಮತ್ತು ಸ್ಪರ್ಧೆಗಳು

- ಪರಿಕಲ್ಪನೆ:
- ಮಾನವನಿಗೆ ಅತಿ ಹೆಚ್ಚು ಪ್ರಿಯವಾದುದೆಂದರೆ ಆತನ ಶರೀರವಾಗಿದ್ದು, ಈ ಶರೀರವನ್ನು ಬಿಟ್ಟು ಒಂದು ಕ್ಷಣವು ಅವನು ಇರುವುದಾದರೆ ನಿರ್ಜೀವಿಯಾಗಿ ಮಾತ್ರ ಶರೀರವೇ ಶ್ರೇಷ್ಟವಾಗಿದ್ದು ಶರೀರವಿಲ್ಲದ ಮಾನವನನ್ನು ಕಲ್ಪಿಸಲು ಅಸಾಧ್ಯ ಈ ಶರೀರದೊಳಗೆ ಆತ್ಮ, ಮನಸ್ಸು ಬುದ್ಧಿ, ಚೈತನ್ಯ, ಭಾವನೆಗಳು ಸೇರಿಕೊಂಡಿವೆ. ಇವುಗಳು ಶರೀರದ ಮೂಲಕ ತಮ್ಮ ಕಾರ್ಯ ಚಟುವಟಿಕೆಗಳು ನಿರ್ವಹಿಸುತ್ತಿರುತ್ತವೆ.

# ಶಿಕ್ಷಣದಲ್ಲಿ ಸಮನ್ವಯ ಶಿಕ್ಷಣದ ಪಾತ್ರ

- ಸಮನ್ವಯ ಶಿಕ್ಷಣವು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಿ ಅವರಿಗೆ ಸಾಮಾನ್ಯ ಶಾಲಾ ತರಗತಿಗಳಲ್ಲಿ ಸಾಮಾನ್ಯ ಮಕ್ಕಳಿಗೆ  ನೀಡುವಂತಹ ಶೈಕ್ಷಣಿಕ ಅನುಭವಗಳನ್ನು ಒದಗಿಸುವುದರ ಜೊತೆಗೆ ಜೀವನವನ್ನು ಎದುರಿಸಲು ಅಗತ್ಯವಾದ ಧೈರ್ಯ, ಆತ್ಮ ವಿಶ್ವಾಸವನ್ನು ಬೆಳೆಸುವುದು ಹಾಗಾಗಿ ವಿಶೇಷ ಕ್ರಮ ಮತ್ತು ಯೋಜನೆಗಳನ್ನು ಅನುಸರಿಸಿ ಅಗತ್ಯವಾದ ಪೂರಕ ಚಟುವಟಿಕೆಗಳನ್ನು ಕೈಗೊಂಡು ಇತರ ಸಾಮಾನ್ಯ ಮಕ್ಕಳಂತೆಯೇ ಈ ಮಕ್ಕಳು ಸಹ ಕಲಿಯಲು ಸಾಧ್ಯವಾಗುವಂತೆ ಪ್ರಯತ್ನಿಸುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಲಾಖೆಯು ಸಮನ್ವಯ ಶಿಕ್ಷಣ ಪರಿಚಯಿಸಿರುತ್ತಾರೆ.

- ಅವಶ್ಯಕತೆ:
- ಉದ್ದೇಶ:
- ವಿಕಲಚೇತನರ ವಿವಿಧ ನ್ಯೂನ್ಯತೆಗಳು:

# ಅಂಗವಿಕಲ ವ್ಯಕ್ತಿಗಳ ಅಧಿನಿಯಮ 2016ರ ಪ್ರಕಾರ ಈ ಕೆಳಕಂಡ 21 ನ್ಯೂನ್ಯತೆಯನ್ನು ವರ್ಗೀಕರಿಸಲಾಗಿದೆ.

- **ದೈಹಿಕ ನ್ಯೂನ್ಯತೆ:**
- ದೈಹಿಕ ನ್ಯೂನತೆಯನ್ನು 4 ಬಾಗಗಳಾಗಿ ವಿಂಗಡಿಸಬಹುದು.
- ಎ) ಚಲನಾಂಗದಲ್ಲಿ ನ್ಯೂನ್ಯತೆ:
- ಕುಷ್ಟರೋೞಗದಲ್ಲಿ ಗುಣವಾಗಿರುವುದು (Leprosy card person)
- ಮೆದುಳುವಾತ/ಮೆದುಳಿನ ಪಾರ್ಶ್ವವಾಯು (Cerbal Palsy)
- ಕುಬ್ಜತೆ (Dwarism)
- ಸ್ನಾಯುಗಳ ದೌರ್ಬಲ್ಯ (Musular Dystrophy)
- ಆಸಿಡ್ ದಾಳಿಗೆ ತುತ್ತಾದವರು (Acid Attack victim)
- ಬಿ) ದೃಷ್ಟಿ ದೋಷ
- ಪೂರ್ಣ ಅಂಧತ್ವ
- ಮಿತಿಯುಳ್ಳ ದೃಷ್ಟಿ/ಪಾರ್ಶ್ವ ದೃಷ್ಟಿಸ
- ಸಿ) ಶ್ರವಣ ದೋಷ
- ಕಿವುಡು ( )
- ಕೇಳಿಸಿಕೊಳ್ಳುವಲ್ಲ ತೊಂದರೆ( )
- ಡಿ) ಮಾತು ಮತ್ತು ಭಾಷೆಯಲ್ಲಿ ನ್ಯೂನ್ಯತೆ (Speech and Language Disability)

ipeta.weebly.com

2. ಬುದ್ಧಿ ನ್ಯೂನ್ಯತೆ:

ನಿರ್ದಿಷ್ಟ ಕಲಿಕಾ ನ್ಯೂನ್ಯತೆಗಳು **(Specific Learning Disabilities)**

ಆಟಿಸಂ **(Autism)**

3. ಮಾನಸಿಕ ಅಸ್ವಸ್ಥತೆ **(Mental illness)**

4. ದೀರ್ಘಕಾಲಿಕ ಕ್ರಮೇಣ ಹೆಚ್ಚುತಾ ಹೋಗುವ ನರಮಂಡಲದ ಕಾಯಿಲೆಗಳಿಂದ ಉಂಟಾಗುವ ನ್ಯೂನ್ಯತೆಗಳು **(Chornic Neurological conditions)**

ಮಲ್ಟಿಪಲ್ ಸ್ಲೀರೋಸಿಸ್ **(Multiple sclerosis)**

ಪಾರ್ಕಿನ್ಸನ್ ಕಾಯಿಲೆ **(Parkin son's Diseases)**

5. ದೀರ್ಘಕಾಲಿಕ ರಕ್ತ ಸಂಬಂಧಿತ ಕಾಯಿಲೆಗಳಿಂದ ಉಂಟಾಗುವ ನ್ಯೂನ್ಯತೆಗಳು:

ಹೀಮೋಫಿಲಿಯಾ **(Hemophilia)**

ಥಲಸ್ಸೇಮಿಯಾ **(Thalassemia)**

ಸಿಕಲ್ ಸೆಲ್ ಕಾಯಿಲೆ: **(Sickle cell Disease)**

6. ಬಹುವಿಧ ಅಂಗವಿಕಲತೆ **(Multipal Disabilities)**

ಕೇಂದ್ರ ಸರಕಾರ ಸೂಚಿಸುವ ಇನ್ಯಾವುದೇ ತೊಂದರೆಗಳನ್ನು ನ್ಯೂನ್ಯತೆಗಳೆಂದು ಪರಿಗಣಿಸುವುದಾಗಿದೆ.

## ವಿಕಲಚೇತನರಿಗಾಗಿ ಶಾಲೆಯಲ್ಲಿ ಹಮ್ಮಿಕೊಳ್ಳುವ ಕ್ರೀಡಾ ಚಟುವಟಿಕೆಗಳು

- ಶಾಲೆಯಲ್ಲಿಕಲಿಯುವ ಮಕ್ಕಳಿಗೆ ನಾವೆಲ್ಲರೂಒಂದೇ ಎಂಬ ಮನೋಭಾವನೆಯನ್ನು ಮೂಡಿಸಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆತಂದಿದೆ.
- ಉದಾ: ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಕ್ಷೀರ ಭಾಗ್ಯ ಮಧ್ಯಾಹ್ನದ ಬಿಸಿಯೂಟ, ಉಚಿತ ಬೈಸಿಕಲ್ ವಿತರಣೆ ನೀಡಲಾಗುತ್ತಿದ್ದು ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಸಮನ್ವಯ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ನೀಡಿ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಸಾಮಾನ್ಯ ಮಕ್ಕಳ ಜೊತೆ ಶಿಕ್ಷಣ ಮುಖ್ಯವಾಹಿನಿಗೆ ತರಬೇಕಾದದ್ದು ಗುರುತರ ಜವಾಬ್ದಾರಿಯಾಗಿದೆ. ಶಾಲೆಯಲ್ಲಿ ಮತ್ತು ಸಮುದಾಯದಲ್ಲಿ ಅಂಗವಿಕಲ ಮಕ್ಕಳು ಸಹ ಸಮಾನ ಪಾಲುದಾರರುಎಂಬುದನ್ನು ಪೋಷಕರಿಗೆ ಮನದಟ್ಟು ಮಾಡಿಕೊಟ್ಟು ಅವರಿಗೆ ಸಿಗುವ ಹಲವಾರು ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಆ ಸೌಲಭ್ಯಗಳನ್ನು ಅವರಿಗೆ ಸಿಗುವಂತೆ ಮಾಡಿ ಅವರನ್ನು ಶಿಕ್ಷಣ ಮುಖ್ಯ ವಾಹಿನಿಗೆ ಶಾಲಾ ತರಗತಿಗಳಲ್ಲಿ ಮತ್ತು ಸಮುದಾಯದಲ್ಲಿ ಸಮನ್ವಯಗೊಳಿಸಬೇಕಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ವಿಕಲಚೇತನರಿಗಾಗಿ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ.

# ವಿಕಲಚೇತನ ವಿದ್ಯಾರ್ಥಿಗಳಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಸ್ಪರ್ದೆಗಳ 14/17ರ ವಯೋಮಿತಿಯೊಳಗಿನ ಬಾಲಕ / ಬಾಲಕಿಯರಿಗೆ ಜಿಲ್ಲೆ/ರಾಜ್ಯ ಮಟ್ಟದಲ್ಲಿ ನಡೆಸುವ ಮೇಲಾಟಗಳ ವಿವರ

# ಪ್ಯಾರಾಲಾಂಪಿಕ್ಸ್

- ಜಗತ್ತಿನಲ್ಲಿ ಅತಿದೊಡ್ಡ ಕ್ರೀಡಾಕೂಟವೆಂದರೆ ಒಲಿಂಪಿಕ್ ಕ್ರೀಡಾಕೂಟ ಪ್ರಾಚೀನ ಒಲಿಂಪಿಕ್ಸ್ ಕ್ರೀಡಾಕೂಟವು ಕ್ರಿ.ಪೂ.776 ರಿಂದ ಕ್ರಿ.ಶ.394 ರವರೆಗೆ ನಡೆದಿದ್ದು. ಆಧುನಿಕ ಒಲಿಂಪಿಕ್ ಕ್ರೀಡಾಕೂಟವು ಕ್ರಿ.ಶ.1896 ರಿಂದ ಎಲ್ಲ ದೇಶಗಳ ಸಹಕಾರದೊಂದಿಗೆ ಫ್ರೆಂಚ್ ದೇಶದ ಬ್ಯಾರನ್ ಡಿ ಕೋಬಾರ್ಟಿನ್‌ರವರು ಪ್ರಾರಂಭ ಮಾಡಿದರು. ಒಲಿಂಪಿಕ್ ಕ್ರೀಡಾಕೂಟಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ ಅವುಗಳೆಂದರೆ
- 1.ಬೇಸಿಗೆ ಒಲಿಂಪಿಕ್ಸ್ 2.ಚಳಿಗಾಲದ ಒಲಿಂಪಿಕ್ಸ್ 3.ಪ್ಯಾರಾ ಒಲಿಂಪಿಕ್ಸ್.

